(4)

16+67

# ಕರ್ನಾಟಕ ವಿಧಾನ ಪರಿಷತ್ತು

## (ನಿಯಮ 330)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀಯುತರುಗಳಾದ ಕೆ.ಎ. ತಿಪ್ಪೇಸ್ವಾಮಿ, ಎಸ್ ವಿ.ಸಂಕನೂರ ಮತ್ತು ಡಾ.ಧನಂಜಯ ಸರ್ಜಿ ಇವರುಗಳು ರಾಜ್ಯದಲ್ಲಿ ಬಹುತೇಕವಾಗಿ ಎಲ್ಲಾ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹರಡುತ್ತಿರುವ ಮತ್ತು ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಕೈಗೊಂಡಿರುವ ನಿಯಂತ್ರಣ ಕ್ರಮಗಳು ಫಲಪ್ರದವಾಗಿರದ ಕಾರಣ, ಡೆಂಗಿ ಸಾಂಕ್ರಾಮಿಕ ರೋಗವು ದಿನೇ ದಿನೇ ಉಲ್ಬಣಗೊಂಡು ಒಂದು ತುರ್ತು ಪರಿಸ್ಥಿತಿಯಾಗಿ ನಿರ್ಮಾಣವಾಗಿದೆ. ಕೆಲವೊಂದು ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳೊಂದಿಗೆ, ಇಲಿ ಜ್ವರ ಪ್ರಕರಣ ಪತ್ತೆಯಾಗಿ ವ್ಯಾಪಕವಾಗಿ ಹರಡುತ್ತಿವೆ. ಡೆಂಗಿ ಪ್ರಕರಣಗಳನ್ನು ಪತ್ತೆಹಚ್ಚಲು ರಾಜ್ಯ ಸರ್ಕಾರ ಅಗತ್ಯವಿರುವ ಸಾಕಷ್ಟು ಪರೀಕ್ಷೆ ಕೇಂದ್ರಗಳನ್ನು ವ್ಯವಸ್ಥೆ ಮಾಡಿಲ್ಲ ಮತ್ತು ಖಾಸಗಿ ಆಸ್ಪತ್ರೆ ಮತ್ತು ಪ್ರಯೋಗಾಲಯಗಳು ಸರ್ಕಾರ ನಿಗಧಿಪಡಿಸಿರುವ ದರಕ್ಕಿಂತ ಹೆಚ್ಚುವರಿ ಹಣ ಪಡೆಯುತ್ತಿದ್ದರೂ, ಸರ್ಕಾರ ಯಾವುದೇ ಕ್ರಮ ಜರುಗಿಸಿ ಇರುವುದಿಲ್ಲ. ಈ ಮಧ್ಯೆ ಡೆಂಗಿ ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಬೆಡ್‌ಗಳ ವ್ಯವಸ್ಥೆ ಇಲ್ಲದೆ, ರೋಗಿಗಳು ಮತ್ತು ಅವರ ಪಾಲಕರು ಪರದಾಡುತ್ತಿದ್ದಾರೆ. ಹಾಗೂ ಕೆಲವೊಂದು ಆಸ್ಪತ್ರೆಗಳ ಕಾರಿಡಾರ್‌ಗಳಲ್ಲಿ ರೋಗಿಗಳನ್ನು ಮಲಗಿಸಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಡೆಂಗಿ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ಸರ್ಕಾರ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ಡೆಂಗಿ ಪ್ರಕರಣವನ್ನು 'ವೈದ್ಯಕೀಯ ತುರ್ತು ಸನ್ನಿವೇಶ' (Medical Emergency) ಎಂದು ಸರ್ಕಾರ ಘೋಷಿಸುವುದು ಅವಶ್ಯವಾಗಿದೆ ಎಂಬ ಬಗ್ಗೆ.**

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-

ಡೆಂಗಿ ಜ್ವರವು ವೈರಸ್ ನಿಂದ ಉಂಟಾಗುವ ಸೋಂಕಾಗಿದ್ದು, ಈಡಿಸ್ ಸೊಳ್ಳೆ ಕಚ್ಚುವುದರಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಸೋಂಕಿತ ಈಡಿಸ್ ಸೊಳ್ಳೆಗಳು ಕಚ್ಚಿದ 5-7 ದಿನಗಳ ನಂತರ ಡೆಂಗಿ ಜ್ವರದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.ಡೆಂಗಿ ಜ್ವರವು ಮನುಷ್ಯನಿಂದ ಮನುಷ್ಯನಿಗೆ ನೇರವಾಗಿ ಹರಡುವುದಿಲ್ಲ. ಸೋಂಕಿತ ಈಡಿಸ್ ಸೊಳ್ಳೆಗಳು ಕಚ್ಚುವುದರಿಂದ ಮಾತ್ರವೇ ಹರಡುತ್ತದೆ.

ಮುಂದುವರೆದು, ರಾಜ್ಯದಲ್ಲಿ ಡೆಂಗಿ ಜ್ವರವು ಸಾಂಕ್ರಾಮಿಕ (endemic)ವಾಗಿದೆ. ಎಲ್ಲಾ ತಿಂಗಳುಗಳಲ್ಲಿಯೂ ಡೆಂಗಿ ಜ್ವರ ಪ್ರಕರಣಗಳು ವರದಿಯಾಗುತ್ತವೆ. ಆದರೆ, ರೋಗ ಪ್ರಸರಣ ಅವಧಿಯಲ್ಲಿ ಅಂದರೆ, ಏಪ್ರಿಲ್ – ಅಕ್ಟೋಬರ್ ಮಾಹೆಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಏರುಗತಿ (spurt) ಕಂಡುಬರುತ್ತದೆ. ಆದಾಗ್ಯೂ, ರೋಗ ಪ್ರಸರಣ ಅವಧಿಗೆ ಪೂರ್ವಭಾವಿಯಾಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ದಿನಾಂಕ:1.1.2024 ರಿಂದ 16.7.2024ರವರೆಗೆ 10449 (78489 ರಕ್ತದ ಮಾದರಿ ಪರೀಕ್ಷೆ) ಡೆಂಗಿ ಜ್ವರ ಪ್ರಕರಣಗಳು ಹಾಗೂ 8 ಖಚಿತ ಡೆಂಗಿ ಮರಣ ಪ್ರಕರಣಗಳು ವರದಿಯಾಗಿದ್ದು, 2023ನೇ ಸಾಲಿನ ಇದೇ ಅವಧಿಯಲ್ಲಿ 2746 (30715 ರಕ್ತದ ಮಾದರಿ ಪರೀಕ್ಷೆ) ಡೆಂಗಿ ಜ್ವರ ಪ್ರಕರಣಗಳು ವರದಿಯಾಗಿದ್ದವು. ಅದರಂತೆ, 2023 ನೇ ಸಾಲಿಗೆ ಹೋಲಿಸಿದಲ್ಲಿ, 2024ನೇ ಸಾಲಿನಲ್ಲಿ ಶಂಕಿತ ಡೆಂಗಿ ಸೀರಂ ಮಾದರಿಯಲ್ಲಿ ಹಾಗೂ ಪ್ರಕರಣಗಳಲ್ಲಿ ಏರಿಕೆಯನ್ನು ಗಮನಿಸಲಾಗಿದೆ.

2024ನೇ ಸಾಲಿನಲ್ಲಿ, **ವಾಡಿಕೆಗಿಂತ ಹೆಚ್ಚಿನ ಡೆಂಗಿ ಜ್ವರ ಪ್ರಕರಣಗಳು**ವರದಿಯಾಗಲು ಈ ಕೆಳಕಂಡ ಕಾರಣಗಳನ್ನು ಗುರುತಿಸಲಾಗಿದೆ.

- 2023ನೇ ಸಾಲಿನಲ್ಲಿ ಮಳೆಯ ಕೊರತೆಯಿಂದಾಗಿ, 2024ರ ಫೆಬ್ರುವರಿಯಿಂದ ಮೇ ತಿಂಗಳವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು. ಇದರಿಂದ, ಸಮುದಾಯ/ ಸಾರ್ವಜನಿಕರು ಗೃಹೋಪಯೋಗಕ್ಕಾಗಿ ನೀರು ಸಂಗ್ರಹಣಾ ಪರಿಕರಗಳಾದ ಸಿಮೆಂಟ್ ತೊಟ್ಟಿ, ಡ್ರಂ , ಬ್ಯಾರೆಲ್ , ಬಕೆಟ್ , ಕೊಡ ಹಾಗೂ ಇತ್ಯಾದಿಗಳಲ್ಲಿ ನೀರನ್ನು ಶೇಖರಿಸುವ ಅಭ್ಯಾಸ ರೂಢಿಸಿಕೊಂಡಿದ್ದು, ಸದರಿ ನೀರು ಸಂಗ್ರಹಣಾ ಪರಿಕರಗಳನ್ನು ಭದ್ರವಾಗಿ ಮುಚ್ಚಿರದ ಪರಿಣಾಮ ಈಡಿಸ್ ಸೊಳ್ಳೆಗಳ ವಂಶಾಭಿವೃದ್ಧಿಯಾಗಿದೆ.



Scanned with OKEN Scanner

- ಹಾಗೂ ನೀರಿನ ಕೊರತೆಯಿಂದ ಶೇಖರಿಸಿಟ್ಟ ನೀರಿನಲ್ಲಿ, ಈಡಿಸ್ ಲಾರ್ವಾಗಳು ಕಂಡುಬಂದರೂ ಲಾರ್ವನಾಶಕ ರಾಸಾಯನಿಕವನ್ನು ಬೆರಸಲು ಸಾರ್ವಜನಿಕರು ಅವಕಾಶವನ್ನು ನೀಡುತ್ತಿರಲಿಲ್ಲ.

- 2024ರ ಫೆಬ್ರವರಿಯಿಂದ ಮೇ ತಿಂಗಳವರಗೆ ತಾಪಮಾನದಲ್ಲಿ ಗಣನೀಯ ಏರಿಕೆ ಹಾಗೂ ಆಗಾಗ್ಗೆ ಸುರಿದ ಮಳೆಯಿಂದ, ಮನೆಯ ಹೊರಾಂಗಣದಲ್ಲಿನ ಅನುಪಯುಕ್ತ ವಸ್ತುಗಳಲ್ಲಿ ಮಳೆ ನೀರು ಶೇಖರಣೆಯಾಗಿ, ಈಡಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳು ಏರಿಕೆಯಾಗಿವೆ.

**ಡೆಂಗಿ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು:**

**ಡೆಂಗಿ ಜ್ವರ ಪರೀಕ್ಷೆ ಹಾಗೂ ಚಿಕಿತ್ಸೆ**

1. ಡೆಂಗಿ ಜ್ವರವನ್ನು ಕರ್ನಾಟಕ ಸಾರ್ವಜನಿಕ ಆರೋಗ್ಯ ನಿಯಮಗಳ ಅಡಿಯಲ್ಲಿ ಅಧಿಸೂಚಿತ ರೋಗವೆಂದು ಪ್ರಕಟಿಸಲಾಗಿದ್ದು, (Dengue including DHF & DSS, is under notifiable disease act under the Karnataka public health act vide Govt. Notification No:HFW/30SMM/98.Dt:13.03.1998)) ಡೆಂಗಿ ಜ್ವರದ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಖಾಸಗಿ ಆರೋಗ್ಯ ಸಂಸ್ಥೆಗಳೂ ಸಹ ಡೆಂಗಿ ಪ್ರಕರಣಗಳ ಮಾಹಿತಿಯನ್ನು ಆರೋಗ್ಯ ಇಲಾಖೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ ಎಂಬ ಬಗ್ಗೆ ಮಾರ್ಗಸೂಚಿಯನ್ನು ನೀಡಲಾಗಿದೆ.
2. ರಾಜ್ಯದಲ್ಲಿ ಒಟ್ಟು 38 DPHLs ( District Public Health Laboratories) ಗಳಲ್ಲಿ ( ಪ್ರತಿ ಜಿಲ್ಲೆಗೆ ಒಂದರಂತೆ, ಹಾಗೂ ಬೆಂಗಳೂರು ನಗರದಲ್ಲಿ-6) ಡೆಂಗಿ ಜ್ವರಕ್ಕೆ ರಕ್ತ ಪರೀಕ್ಷೆಯನ್ನು ನಡೆಸಲಾಗುತ್ತಿದೆ.
3. ಸದರಿ DPHL ಗಳಲ್ಲಿ ಪರೀಕ್ಷೆ ಡೆಂಗಿ ಜ್ವರ ನಡೆಸಲು ಅಗತ್ಯ ಸಂಖ್ಯೆಯ Dengue NS1 Ag testing kits & IgM Ab testing kit ಗಳು ಲಭ್ಯವಿದ್ದು, ಶಂಕಿತ ಡೆಂಗಿ ಜ್ವರದ ಸೀರಂ ಮಾದರಿಗಳ ಪರೀಕ್ಷೆಯಲ್ಲಿ ಯಾವುದೇ ವಿಳಂಬವಾಗುತ್ತಿಲ್ಲ.
4. ಇದಲ್ಲದೆ, ರಾಜ್ಯದಲ್ಲಿ ಒಟ್ಟು 125 ಖಾಸಗಿ ಆಸ್ಪತ್ರೆ / ಪ್ರಯೋಗ ಶಾಲೆಗಳಲ್ಲಿಯೂ ಡೆಂಗಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ.
5. ಗುಂಪಾಗಿ ಜ್ವರ ಪ್ರಕರಣಗಳು (fever clusters)ವರದಿಯಾಗುವ ಗ್ರಾಮ / ವಾರ್ಡ್ ಗಳಲ್ಲಿ ಫೀವರ್ ಕ್ಲಿನಿಕ್ ಗಳನ್ನು ತೆರೆದು, ಜ್ವರ ತಪಾಸಣೆ, ಬಿ ಪಿ ಪರೀಕ್ಷೆ, I V fluid ಅನ್ನು ಹಾಕಲಾಗುತ್ತಿದೆ. ಶಂಕಿತ ಡೆಂಗಿ ಜ್ವರ ಪ್ರಕರಣಗಳ ರಕ್ತ ಮಾದರಿಗಳನ್ನು ಸಂಗ್ರಹಿಸಿ ಸೆಂಟಿನಲ್ ಪ್ರಯೋಗಾಲಯಗಳಲ್ಲಿ ಉಚಿತವಾಗಿ ಪರೀಕ್ಷಿಸಲಾಗುತ್ತಿದೆ.
6. ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ಉಚಿತವಾಗಿ ನೀಡಲು ಸರ್ಕಾರಿ ಸಂಸ್ಥೆಗಳಲ್ಲಿ ಔಷಧ ಸಾಮಗ್ರಿಗಳನ್ನು ಲಭ್ಯವಿರಿಸಲಾಗಿದೆ.
7. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಡೆಂಗಿ ರಕ್ತ ಪರೀಕ್ಷೆ ಮಾಡಲಾಗುತ್ತಿದ್ದು, ಖಾಸಗಿ ಆಸ್ಪತ್ರೆ ಹಾಗೂ ಖಾಸಗಿ ಪ್ರಯೋಗ ಶಾಲೆಗಳಿಗೆ ಡೆಂಗಿ ಖಚಿತ ಪರೀಕ್ಷೆಯಾದ ಎಲಿಸಾ ಆಧಾರಿತ NS1 & IgM ಪರೀಕ್ಷೆಗೆ ತಲಾ ರೂ 300/- ಮೀರದಂತೆ ಹಾಗೂ Screening test ಗಳಿಗೆ ( NS1, IgM & IgG) ರೂ 250/- ಗಳ ಶುಲ್ಕವನ್ನು ನಿಗದಿಪಡಿಸಲಾಗಿದೆ.
8. ನಿಗದಿತ ಶುಲ್ಕಕ್ಕಿಂತ, ಹೆಚ್ಚಿನ ದರ ವಿಧಿಸಿದಲ್ಲಿ ಕೆ ಪಿ ಎಂ ಈ ಕಾಯ್ದೆ ಅನ್ವಯ ಕ್ರಮಕೈಗೊಳ್ಳಲಾಗುತ್ತಿದೆ. ಉದಾಹರಣೆಗೆ , ಹೆಚ್ಚಿನ ದರ ವಿಧಿಸಿದ ಬೆಂಗಳೂರು ನಗರ ಜಿಲ್ಲೆಯಲ್ಲಿ 31 ಆರೋಗ್ಯ ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದೆ.
9. ಡೆಂಗಿ ಜ್ವರ ಪ್ರಕರಣಗಳ ಅಗತ್ಯ ನಿರ್ವಹಣೆಗಾಗಿ ತಾಲ್ಲೂಕು ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಕನಿಷ್ಠ ತಲಾ 5 ಹಾಗೂ 8-10 ಬೆಡ್ ಗಳನ್ನು ಮೀಸಲಿರಿಸಲಾಗಿದೆ.



Scanned with OKEN Scanner

10. ಶಂಕಿತ ಡೆಂಗಿ ಪ್ರಕರಣಗಳ ಸಂಖ್ಯೆಯು ಹೆಚ್ಚಿದ್ದಲ್ಲಿ, ಇತರೆ ವಿಭಾಗಗಳ ಬೆಡ್ ಗಳನ್ನೂ ( ಆಯುಷ್ , ದಂತ ಹಾಗೂ ಕಣ್ಣಿನ ವಿಭಾಗ) ಸಹ ಬಳಕೆ ಮಾಡುವಂತೆ ಸೂಚನೆಯನ್ನು ನೀಡಲಾಗಿದೆ.
11. ಡೆಂಗಿ ಜ್ವರ ಪ್ರಕರಣಗಳ ಪರೀಕ್ಷೆ, ಚಿಕಿತ್ಸೆ ಹಾಗೂ ನಿರ್ವಹಣೆಯ ಸೌಲಭ್ಯಗಳನ್ನು (ICU ಸೇರಿದಂತೆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಂಪೂರ್ಣ ಉಚಿತವಾಗಿ ಒದಗಿಸಲಾಗುತ್ತಿದೆ. (BPL & APL ವರ್ಗದವರಿಗೆ).

12. ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳ ICU ಮತ್ತು HDU ಗಳಲ್ಲಿ ದಾಖಲಾಗಿರುವ ತೀವ್ರ ಡೆಂಗಿಜ್ವರ ಪ್ರಕರಣಗಳ ಚಿಕಿತ್ಸೆ ಹಾಗೂ ನಿರ್ವಹಣೆಯ ಉಸ್ತುವಾರಿಗಾಗಿ Tele ICU ವ್ಯವಸ್ಥೆಯನ್ನು ಮಾಡಲಾಗಿದೆ.
13. ರಾಜ್ಯದ ದೈನಂದಿನ ಡೆಂಗಿ ಜ್ವರ ಪರಿಸ್ಥಿತಿಯ ಸೂಕ್ಷ್ಮ ಮೇಲ್ವಿಚಾರಣೆ ಹಾಗೂ ಉಸ್ತುವಾರಿಗಾಗಿ, ಎನ್ ವಿ ಬಿ ಡಿಸಿ ಪಿ ವಿಭಾಗದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯಸೌಧ, ಬೆಂಗಳೂರು, ಇಲ್ಲಿ "ಡೆಂಗಿ ವಾರ್ ರೂಮ್" ಅನ್ನು ಸಕ್ರಿಯಗೊಳಿಸಲಾಗಿದೆ.
14. ಎಲ್ಲಾ ಜಿಲ್ಲೆಗಳು/ಬಿಬಿಎಂಪಿ ವ್ಯಾಪ್ತಿಯ ಡೆಂಗಿ ಜ್ವರ ಪರಿಸ್ಥಿತಿಯ ಮೇಲ್ವಿಚಾರಣೆಗಾಗಿ 'ಜಿಲ್ಲಾ ವಾರ್ ರೂಮ್ ಅನ್ನು ಸಕ್ರಿಯಗೊಳಿಸಲಾಗಿದ್ದು, ಡೆಂಗಿ ಜ್ವರ ನಿಯಂತ್ರಣ ಕ್ರಮಗಳ ಮಾಹಿತಿ ಸಂಗ್ರಹಣೆ ಹಾಗೂ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಲಾಗುತ್ತಿದೆ.

**ಅಂತರ ಇಲಾಖಾ ಸಮನ್ವಯ :**

1. ಆಯುಕ್ತರು, ಆಕುಕ ಸೇವೆಗಳು, ವಿಶೇಷ ಆಯುಕ್ತರು, (ಆರೋಗ್ಯ ಮತ್ತು ಐ.ಟಿ) ಬಿಬಿಎಂಪಿ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಮ್ಮ ವ್ಯಾಪ್ತಿಯಲ್ಲಿ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಗಳನ್ನು ನಡೆಸಿ ಡೆಂಗಿ ಕುರಿತು ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಯಂತೆ ಕ್ರಮವಹಿಸಲು ಮತ್ತು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಪತ್ರ ಮೂಲಕ ಸೂಚಿಸಿರುತ್ತಾರೆ.
2. ಆಯುಕ್ತರು, ಆಕುಕ ಸೇವೆಗಳು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಪೌರಾಡಳಿತ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳು/ ನಗರ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಕಟ್ಟಡಗಳ ಕಾಮಗಾರಿ ಪ್ರದೇಶಗಳಲ್ಲಿ, ಹೋಟೆಲ್, ಅಂಗಡಿ-ಮುಂಗಟ್ಟುಗಳು, ವಾಣಿಜ್ಯ ಸಂಕೀರ್ಣಗಳ ಸುತ್ತ-ಮುತ್ತಲಿನ ಘನ ತ್ಯಾಜ್ಯಗಳಲ್ಲಿ ಮಳೆನೀರು ಸಂಗ್ರಹವಾಗಲಿದ್ದು ಅಲ್ಲಿ ಈಡಿಸ್ ಬೆಳವಣಿಗೆ ಹೆಚ್ಚಾಗುವುದರಿಂದ ಘನತ್ಯಾಜ್ಯಾಗಳನ್ನು ವಿಲೇವಾರಿ ಮಾಡುವ ಬಗ್ಗೆ ಕ್ರಮಕೈಗೊಳ್ಳಲು ಪತ್ರ ಮೂಲಕ ಸೂಚಿಸಿರುತ್ತಾರೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 7-6-2024 ರಂದು ಅಂತರ್ ಇಲಾಖಾ ಸಮನ್ವಯ ಸಭೆಯನ್ನು ನಡೆಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಇಲಾಖೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೃಷಿ, ಮೀನುಗಾರಿಕೆ, ಸಾರಿಗೆ ಇಲಾಖೆ ಇತ್ಯಾದಿಗಳ ಇಲಾಖೆಯ ಮುಖ್ಯಸ್ಥರೊಂದಿಗೆ ಸಭೆ ನಡೆಸಿ, ಡೆಂಗಿ ಜ್ವರ ನಿಯಂತ್ರಣದಲ್ಲಿ ಎಲ್ಲಾ ಇಲಾಖೆಗಳು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಲು ಸೂಚಿಸಲಾಗಿದೆ.
4. ದಿನಾಂಕ: 25-06-2024 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಡೆಂಗಿ ನಿಯಂತ್ರಣಕ್ಕೆ, ಸಮನ್ವಯ ಸಭೆಯನ್ನು ನಡೆಸಿ ರಾಜ್ಯಾದ್ಯಂತ ಪ್ರತಿ ಶುಕ್ರವಾರ "ಲಾರ್ವಾ



Scanned with OKEN Scanner

ನಿರ್ಮೂಲನ ದಿನ"ವನ್ನು ಆಚರಿಸಲು ಮಾನ್ಯ ಮುಖ್ಯ ಮಂತ್ರಿಯವರು ಸಲಹೆ ನೀಡಿರು ಅದರಂತೆ ರಾಜ್ಯಾದ್ಯಂತ ಪ್ರತಿ ಶುಕ್ರವಾರ "ಲಾರ್ವಾ ನಿರ್ಮೂಲನ ದಿನ"ವನ್ನು ಹಮ್ಮಿಕೊಳ್ಳಲಾಗಿದೆ.

5. ದಿನಾಂಕ:02-07-2024 ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ಅಂತರ್ ಇಲಾಖಾ ಸಮನ್ವಯ ಸಭೆಯನ್ನು ಏರ್ಪಡಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವೈದ್ಯಕೀಯ ಶಿಕ್ಷಣ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್, ನಗರ ಅಭಿವೃದ್ಧಿ ಇಲಾಖೆ, ಪೌರಾಡಳಿತ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗು ಇತ್ಯಾದಿ ಇಲಾಖೆಗಳೊಂದಿಗೆ ಸಭೆ ನಡೆಸಿ, ಡೆಂಗಿ ಜ್ವರ ನಿಯಂತ್ರಿಸಲು ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ತುರ್ತಾಗಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

6. ದಿನಾಂಕ: 04-07-2024 ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವರ್ಚುಯಲ್ ಸಭೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಪ್ರತಿ ಶುಕ್ರವಾರ ತಮ್ಮ ಇಲಾಖೆಯ ಕಛೇರಿಗಳಲ್ಲಿ ಲಾರ್ವಾ ನಿರ್ಮೂಲನ ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡು ಲಾರ್ವಾ ನಾಶಪಡಿಸಿ ಡೆಂಗಿ ಹರಡದಂತೆ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

7. ದಿನಾಂಕ: 08-07-2024 ಮತ್ತು 09-07-2024 ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಮತ್ತು ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಸಭೆಯನ್ನು ನಡೆಸಿ ಡೆಂಗಿ ನಿಯಂತ್ರಣಕ್ಕೆ ಎಲ್ಲಾ ಇಲಾಖೆಗಳ ಸಮನ್ವಯತೆಯೊಂದಿಗೆ ಸಮರೋಪಾದಿಯಲ್ಲಿ ಡೆಂಗಿಜ್ವರ ಹರಡದಂತೆ ಎಲ್ಲಾ ನಿಯಂತ್ರಣ ಕ್ರಮಗಳನ್ನು ಹಾಗೂ ಎಲ್ಲರಿಗೂ ಸೂಕ್ತ ಚಿಕಿತ್ಸೆ ದೊರೆಯುವಂತೆ ಮತ್ತು ಮರಣ ಪ್ರಕರಣಗಳು ಸಂಭವಿಸದಂತೆ ಸೂಕ್ತ ಕ್ರಮಕೈಗೊಂಡು ಕ್ರಿಯಾ ಕಾರ್ಯಾಚರಣೆ ಪಡೆಯನ್ನು ತಮ್ಮ ಜಿಲ್ಲೆಯಲ್ಲಿ ರಚಿಸಿ, ಡೆಂಗಿ ಕಂಡು ಬಂದ ಗ್ರಾಮಗಳಿಗೆ ಶೀಘ್ರವೇ ಭೇಟಿನೀಡಿ ನಿಯಂತ್ರಣ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

**ಜ್ವರ ಸಮೀಕ್ಷೆ, ಈಡಿಸ್ ಲಾರ್ವಾ ಸಮೀಕ್ಷೆ ಹಾಗೂ ಸ್ವಯಂ ರಕ್ಷಣಾ ವಿಧಾನಗಳ ಅಳವಡಿಕೆ**

1. ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ( ಗ್ರಾಮೀಣ ಪ್ರದೇಶ) ಪ್ರತಿದಿನ ಈಡಿಸ್ ಲಾರ್ವಾ ಸಮೀಕ್ಷೆ ಹಾಗೂ ಉತ್ಪತ್ತಿ ತಾಣ ನಾಶ ಚಟುವಟಿಕೆಯನ್ನು ನಡೆಸುತಿದ್ದು ಡೆಂಗಿ ಜ್ವರದ ಬಗ್ಗೆ ಸಮುದಾಯಕ್ಕೆ ಆರೋಗ್ಯ ಶಿಕ್ಷಣವನ್ನು ನೀಡುತ್ತಿದ್ದಾರೆ.
2. ಇದಲ್ಲದೆ, ಪಟ್ಟಣ ಪ್ರದೇಶದಲ್ಲಿನ ಗ್ರಾಮೀಣ ಪ್ರದೇಶದ , ಆರೋಗ್ಯ ಕಾರ್ಯಕರ್ತರನ್ನು ( ಆಶಾ ಹೊರತು ಪಡಿಸಿ) ಪ್ರತಿ ಮೊದಲನೇ ಹಾಗೂ ಮೂರನೇ ಶುಕ್ರವಾರ ಪಟ್ಟಣ ಪ್ರದೇಶಗಳಿಗೆ ನಿಯೋಜಿಸಿ ಈಡಿಸ್ ಲಾರ್ವಾ ನಿರ್ಮೂಲನೆಯನ್ನು ನಡೆಸಲಾಗುತ್ತಿದೆ.
3. ಪ್ರಸ್ತುತ, ಪ್ರತಿ ಶುಕ್ರವಾರ : ಲಾರ್ವಾ ನಿರ್ಮೂಲನಾ ದಿನವನ್ನಾಗಿ ಆಚರಿಸಲಾಗುತ್ತಿದೆ ( ಅಥವಾ ಜಿಲ್ಲಾಡಳಿತದಿಂದ ನಿಗದಿಯಾದ ಇನ್ನಾವುದೇ ದಿನ). ಹಾಗೂ ಸದರಿ ದಿನದಂದು ಮಧ್ಯಾಹ್ನ ನಿಗದಿತ ನೀರು ಸರಬರಾಜನ್ನು ಸ್ಥಳೀಯ ಸಂಸ್ಥೆಗಳು ಖಚಿತಪಡಿಸಿಕೊಳ್ಳುವುದು.
4. ಈಡಿಸ್ ಲಾರ್ವಾ ನಿರ್ಮೂಲನೆಯಲ್ಲಿ ಸಾರ್ವಜನಿಕರ ಪಾತ್ರವು ಮಹತ್ವದ್ದಾಗಿದ್ದು, ಪ್ರತಿ ಶುಕ್ರವಾರ ಎಲ್ಲರೂ ತಮ್ಮ ಮನೆಯ ಒಳಾಂಗಣ, ಸುತ್ತ-ಮುತ್ತಲಿನ ಹೊರಾಂಗಣದಲ್ಲಿ ಹಾಗೂ ಸಿಬ್ಬಂದಿಗಳು ತಾವು ಕರ್ತವ್ಯ ನಿರ್ವಹಿಸುವ ಸ್ಥಳಗಳಲ್ಲಿ



Scanned with OKEN Scanner

ಲಾರ್ವಾ ನಿರ್ಮೂಲನ ಮಾಡುವ ನಿಟ್ಟಿನಲ್ಲಿ , ಚಟುವಟಿಕೆಗಳಿಗೆ ರಾಜ್ಯಾದ್ಯಂತ ಚಾಲನೆಯನ್ನು ನೀಡಲಾಗಿದೆ.

5. ಅಗತ್ಯ ಪ್ರಮಾಣದ ಲಾರ್ವಾನಾಶಕ ಹಾಗೂ ಫಾಗಿಂಗ್ ರಾಸಾಯನಿಕವು ಎಲ್ಲಾ ಹಂತದಲ್ಲಿಯೂ ಲಭ್ಯವಿರುವಂತೆ ಕ್ರಮವಹಿಸಲಾಗಿದೆ.
6. ಹೆಚ್ಚು ಡೆಂಗಿ ಜ್ವರ ಪ್ರಕರಣಗಳು, High larva index, ಶಂಕಿತ ಡೆಂಗಿ ಮರಣಗಳು ವರದಿಯಾದ ಗ್ರಾಮದಲ್ಲಿ / ವಾರ್ಡ್ ನಲ್ಲಿ Indoor space spray ಕೈಗೊಳ್ಳಲಾಗುತ್ತಿದೆ. Indoor space spray ಮಾಡಿದ ನಂತರ, 30 ನಿಮಿಷಗಳ ಕಾಲ ಮನೆಯ ಸದಸ್ಯರು ಮನೆಯಿಂದ ಹೊರಗೆ ಇರುವಂತೆ ಸೂಚಿಸಲಾಗುತ್ತಿದೆ.
7. ಸ್ವಯಂ ರಕ್ಷಣಾ ವಿಧಾನಗಳ ಕ್ರಮಗಳಾದ ಉದ್ದನೆಯ ತೋಳು ಹಾಗೂ ಪ್ಯಾಂಟ್ ಗಳನ್ನು ಮುಚ್ಚುವಂತಹ ಬಟ್ಟೆಗಳನ್ನು ಧರಿಸುವುದು, ಹಗಲು ಹೊತ್ತಿನಲ್ಲಿ ವಿಶ್ರಾಂತಿ ಪಡೆಯುವವರು ( ವೃದ್ಧರು, ಗರ್ಭಿಣಿಯರು ಹಾಗೂ ಮಕ್ಕಳು) ಸೊಳ್ಳೆ ಪರದೆ ತಪ್ಪದೇ ಬಳಸುವಂತೆ ಸೂಚಿಸಿದೆ. ಸೊಳ್ಳೆ ಕಡಿತದಿಂದ ರಕ್ಷಿಸಿಕೊಳ್ಳಲು , ಕೈಕಾಲು ಹಾಗೂ ಕುತ್ತಿಗೆಗೆ ಹಚ್ಚಿಕೊಳ್ಳಲು ಬೇವಿನ ಎಣ್ಣೆಯನ್ನು ಪೂರೈಸುವಂತೆ ಸೂಚಿಸಿದೆ.
8. ಬೇವಿನ ಎಣ್ಣೆಯು ಲಭ್ಯವಿಲ್ಲದಿದ್ದಲ್ಲಿ, Citronella oil, lemon grass oil, DEET ( N, N – diethyl-meta-toulamide) ಹೊಂದಿರುವ ಪರ್ಯಾಯ Mosquito repellent ಗಳನ್ನು ಪೂರೈಸಲಾಗುತ್ತಿದೆ.

**ಆರೋಗ್ಯ ಶಿಕ್ಷಣ ಚಟುವಟಿಕೆಗಳು ಹಾಗೂ ವರ್ತನೆ ಬದಲಾವಣೆ ಸಂವಹನ**

ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ಸಂವಹನ ಚಟುವಟಿಕೆಗಳ ಮೂಲಕ ಸಮುದಾಯದಲ್ಲಿ ಉತ್ತಮ ಜಾಗೃತಿ ಮೂಡಿಸಲು ಸ್ಥಳೀಯ ಭಾಷೆಗಳಿಗನು ಗುಣವಾಗಿ ಐಇಸಿ ಚಟುವಟಿಕೆಗಳನ್ನು IPC, Mid Media, Social Media, News Media, Mass Media, Digital Media ಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ.

1) ಡೆಂಗಿ ಜ್ವರ ನಿಯಂತ್ರಣಕ್ಕಾಗಿ ಮೇ 16 2024ರಂದು ರಾಷ್ಟ್ರೀಯ ಡೆಂಗಿ ದಿನಾಚರಣೆಯನ್ನಾಗಿ ಮತ್ತು ಜುಲೈ ಮಾಹೆಯನ್ನು ಡೆಂಗಿ ವಿರೋಧಿ ಮಾಸವನ್ನಾಗಿ ಆಚರಿಸಲಾಗುತ್ತಿದೆ.

2) ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ನಡೆದ ಸಂದರ್ಶನದಲ್ಲಿ ಹಾಗೂ ಫೋನ್ ಇನ್ ನೇರ ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡು, ಅಗತ್ಯ ಮಾಹಿತಿಯನ್ನು ಹಾಗೂ ಡೆಂಗಿ ನಿಯಂತ್ರಣದಲ್ಲಿ ಸಮುದಾಯದ ಪಾತ್ರದ ಕುರಿತು ಮಾಹಿತಿಯನ್ನು ನೀಡಿರುತ್ತಾರೆ.

3) ಶಾಲಾ ಶಿಕ್ಷಕರುಗಳಿಗೆ,ಶಾಲಾ ಮಕ್ಕಳಿಗೆ, ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ, ಗ್ರಾಮ/ವಾರ್ಡ್ ಮಟ್ಟದಲ್ಲಿ ಗ್ರಾಮದ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಅಂಗನವಾಡಿ ಕಾರ್ಯಕರ್ತೆಯರು, ಸ್ತ್ರೀ ಶಕ್ತಿ ಸಂಘದ ಪದಾಧಿಕಾರಿಗಳು, ಸ್ವಯಂ ಸೇವಕರು, ಹಾಲು ಉತ್ಪಾದಕರ ಸಂಘದ ಸದಸ್ಯರುಗಳು, ಧಾರ್ಮಿಕ ಮುಖಂಡರನ್ನು ಒಳಗೊಂಡಂತೆ ಡೆಂಗಿ ನಿಯಂತ್ರಣ ಮತ್ತು ಮುಂಜಾಗ್ರತೆ ಬಗ್ಗೆ ಅಡ್ವೊಕೆಸಿ ಕಾರ್ಯಗಾರಗಳನ್ನು ನಡೆಸಲಾಗಿದೆ.

4) ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಮತ್ತು ಮಾನ್ಯ ಆರೋಗ್ಯ ಸಚಿವರಿಂದ ಡೆಂಗಿ ಜ್ವರ ಮತ್ತು ನಿಯಂತ್ರಣ ಕುರಿತು ಸಾರ್ವಜನಿಕರಿಗೆ ವಿಡಿಯೋ ಸಂದೇಶವನ್ನು ಎಲ್ಲಾ ಸಾಮಾಜಿಕ ಜಾಲತಾಣದಲ್ಲಿ ಪ್ರಚುರಗೊಳಿಸಲಾಗಿದೆ.

5) ಪ್ರತಿದಿನ ಘನತ್ಯಾಜ್ಯ ಸಂಗ್ರಹಣಾ ವಾಹನಗಳಲ್ಲಿ ಮೈಕಿಂಗ್ ನ ಮೂಲಕ ಡೆಂಗಿ ನಿಯಂತ್ರಣ ಕ್ರಮಗಳ ಕುರಿತು ಮಾಹಿತಿಯನ್ನು ಪ್ರಚುರ ಪಡಿಸಲಾಗುತ್ತಿದೆ.



Scanned with OKEN Scanner

ಒಟ್ಟಾರೆಯಾಗಿ, ಪ್ರಸ್ತುತ ಡೆಂಗಿ ಜ್ವರ ಪ್ರಕರಣಗಳ ಏರಿಕೆಯನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಡೆಂಗಿ ಜ್ವರ ನಿಯಂತ್ರಣ , ಡೆಂಗಿ ಜ್ವರ ಪ್ರಕರಣಗಳ ಸಮರ್ಪಕ ನಿರ್ವಹಣೆಗಾಗಿ ಮಾರ್ಗಸೂಚಿಯ ಪಾಲನೆ , ಈಡಿಸ್ ಲಾರ್ವಾ ನಿರ್ಮೂಲನೆಯಲ್ಲಿ ಸಾರ್ವಜನಿಕರು, ಇತರ ಇಲಾಖೆಗಳು ಹಾಗೂ ಚುನಾಯಿತ ಪ್ರತಿನಿಧಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಹಾಗೂ ಸ್ವಯಂ ರಕ್ಷಣಾ ವಿಧಾನಗಳನ್ನು ಪಾಲಿಸುವ ಬಗ್ಗೆ ವಿವಿಧ ಮಾಧ್ಯಮಗಳಲ್ಲಿ ಪ್ರಚುರಪಡಿಸುವ ಮೂಲಕ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಕೊನೆಯದಾಗಿ ತಜ್ಞರ ಸಲಹಾ ಸಮಿತಿಯ ಅಭಿಪ್ರಾಯದಂತೆ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರ ವತಿಯಿಂದ ತೆಗೆದುಕೊಂಡಿರುವ ಕ್ರಮಗಳು ಸರಿಯಾದ ನಿಟ್ಟಿನಲ್ಲಿ ಹಾಗೂ ಅಗತ್ಯಕ್ಕೆ ತಕ್ಕಂತೆ ಸಾಕ್ಷಟಾಗಿರುತ್ತವೆ. ಅಲ್ಲದೇ ಈ ಸಮಯದಲ್ಲಿ ಯಾವುದೇ ರೀತಿಯ ಮೆಡಿಕಲ್ ಎಮರ್ಜನಿಸ್ಸಿ ಘೋಷಿಸುವ ಅಗತ್ಯತೆ ಇರುವುದಿಲ್ಲ. ಯಾಕೆಂದರೆ ಆಸ್ಪತ್ರೆಗಳಿಗೆ ಒಳರೋಗಿಗಳ ಸಂಖ್ಯೆ ಸೀಮಿತವಾಗಿರುವುದರಿಂದ ಆಸ್ಪತ್ರೆಗಳ ಮೂಲಭೂತ ಸೌಕರ್ಯ ಅವರುಗಳಿಗೆ ಚಿಕಿತ್ಸೆ ನೀಡಲು ಸಾಕಾಗಿರುತ್ತದೆ. ಹಾಗೂ ಈ ಸಂದರ್ಭದ ಅಗತ್ಯತೆ ಜನಸಾಮಾನ್ಯಗಳಲ್ಲಿ ಈ ರೋಗದ ಮುಂಜಾಗ್ರತೆ ಕ್ರಮ ಕುರಿತು ಹಾಗೂ ರೋಗ ಎಚ್ಚರಿಕೆ ಲಕ್ಷಣಗಳ ಕುರಿತು ಅರಿವು ಮೂಡಿಸುವಂತಹ ಆಗಿರುತ್ತದೆ. ಅದರ ಬದಲಾಗಿ ಈ ಸಮಯದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಲ್ಲಿ ಒಂದು ಕಡೆ ಇದರಿಂದ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ ಮತ್ತು ಇನ್ನೊಂದು ಕಡೆ ಇದರಿಂದ ಜನಸಾಮಾನ್ಯರಲ್ಲಿ ಅನಗತ್ಯವಾಗಿ ಭಯವುಂಟು ಮಾಡಿಸಿದಂತಾಗುತ್ತದೆ.

ಸಂಖ್ಯೆ:ಆಕುಕ 95 ಎಸ್‌ಎಂಎಂ 2024.

( ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner

<u>**ಕರ್ನಾಟಕ ವಿಧಾನ ಪರಿಷತ್ತು**</u>

**ವಿಷಯ: ಮಾನ್ಯ ವಿಧಾನಸಭಾ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ಇವರು ನಿಯಮ-330ರಡಿ ರಾಜ್ಯದಲ್ಲಿ ಡೆಂಗ್ಯೂ ಜ್ವರ ಪ್ರಕರಣಗಳು ದಿನದಿಂದ ದಿನಕ್ಕೆ ಉಲ್ಬಣವಾಗುತ್ತಿವೆ ಮತ್ತು ಅದರಿಂದ ಸಾವಿನ ಸಂಖ್ಯೆ ಹೆಚ್ಚುತ್ತಿರುವುದು, ಈ ಒಂದು ಕಾರಣದಿಂದ ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು, ಡೆಂಗ್ಯೂ ನಿಯಂತ್ರಣಕ್ಕಾಗಿ ಇನ್ನೂ ಹೆಚ್ಚಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಕುರಿತು ಸದನದಲ್ಲಿ ಚರ್ಚಿಸುವ ಬಗ್ಗೆ:-**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

*****

**ರಾಜ್ಯದಲ್ಲಿ ಡೆಂಗ್ಯೂ ಜ್ವರ ನಿಯಂತ್ರಣಕ್ಕಾಗಿ ಇಲಾಖೆಯು ತೆಗೆದುಕೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:-**

ಡೆಂಗ್ಯೂ ಜ್ವರವು ಒಂದು ವೈರಸ್ ನಿಂದ ಉಂಟಾಗುವ ಸಾಂಕ್ರಾಮಿಕ ಖಾಯಿಲೆ. ಇದು ಸೋಂಕಿತ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆ ಹಗಲು ಹೊತ್ತಿನಲ್ಲಿ ಕಚ್ಚುವುದರ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಸಾಮಾನ್ಯವಾಗಿ ಗೃಹೋಪಯೋಗಕ್ಕಾಗಿ ಶೇಕರಿಸಿ ಇಟ್ಟಿರುವ ನೀರಿನಲ್ಲಿ ಹಾಗೂ ಪರಿಸರದಲ್ಲಿ ಬಿಸಾಡಿದ ಅನುಪಯುಕ್ತ ವಸ್ತುಗಳಾದ ಟೈರು, ಪ್ಲಾಸ್ಟಿಕ್ ಗ್ಲಾಸ್/ಕಪ್ಪು, ತೆಂಗಿನ ಚಿಪ್ಪು, ಇತ್ಯಾದಿಗಳಲ್ಲಿ ಮಳೆಯ ನೀರು ಸಂಗ್ರಹವಾಗಿ ಅವುಗಳಿಂದ ಈಡಿಸ್ ಸೊಳ್ಳೆಗಳ ವಂಶಾಭಿವೃದ್ಧಿಯಾಗುತ್ತವೆ.

ಈ ಜ್ವರವು ಮಳೆಗಾಲದ ಮೊದಲು ಹಾಗೂ ನಂತರ ಅವಧಿಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಡೆಂಗಿ ಜ್ವರ ಹರಡದಂತೆ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸೂಕ್ತ ಮಾಧ್ಯಮಗಳ ಮೂಲಕ ಸಮುದಾಯಕ್ಕೆ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಡೆಂಗ್ಯೂ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಂಡಿರುತ್ತದೆ. ಡೆಂಗ್ಯೂ ಜ್ವರಕ್ಕೆ ಯಾವುದೇ ಖಚಿತ ಚಿಕಿತ್ಸೆ ಇಲ್ಲದಿರುವುದರಿಂದ ಡೆಂಗ್ಯೂ ಬಾರದಂತೆ ತಡೆಗಟ್ಟಲು ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡಲು ಆರೋಗ್ಯ ಇಲಾಖೆಯು ಇತರೆ ಇಲಾಖೆಗಳ ಸಮನ್ವಯದೊಂದಿಗೆ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ. ಸಾಮಾನ್ಯ ಡೆಂಗ್ಯೂ ಜ್ವರವು ರೋಗಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ, ಅಗತ್ಯ ವಿಶ್ರಾಂತಿ ಹಾಗೂ ಹೆಚ್ಚು ದ್ರವಾಹಾರ ಸೇವನೆಯಿಂದ ಗುಣಮುಖವಾಗುತ್ತದೆ.

ಆದಾಗ್ಯೂ ಮಧ್ಯಮ ಹಾಗೂ ತೀವ್ರ ಲಕ್ಷಣಗಳನ್ನು ಹೊಂದಿದ ಡೆಂಗ್ಯೂ ರಕ್ತಸ್ರಾವ ಜ್ವರ ಹಾಗೂ ಡೆಂಗ್ಯೂ ಶಾಕ್ ಸಿಂಡ್ರೋಮ್ ಪ್ರಕರಣಗಳ ಸಮರ್ಪಕ ಹಾಗೂ ಸೂಕ್ತ ನಿರ್ವಹಣೆಗಾಗಿ National Centre for Vector Borne Disease Control, Govt. of India, ಇವರ National Guidelines for Management of Dengue fever, 2023ಅನ್ನು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಪಾಲಿಸಲಾಗುತ್ತಿದೆ.

**ಡೆಂಗಿ ಜ್ವರವು ಈಡಿಸ್ ಸೊಳ್ಳೆಗಳಿಂದ ಹರಡುವ ಸೋಂಕಾಗಿದ್ದು, ಇದರ ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ಈ ಕೆಳಕಂಡ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ:-**

1. ಡೆಂಗ್ಯೂ ಜ್ವರವನ್ನು ಕರ್ನಾಟಕ ಸಾರ್ವಜನಿಕ ಆರೋಗ್ಯ ನಿಯಮಗಳ ಅಡಿಯಲ್ಲಿ ಅಧಿಸೂಚಿತ ರೋಗವೆಂದು ಪ್ರಕಟಿಸಲಾಗಿದ್ದು, (Dengue including DHF & DSS, is under notifiable disease act under the Karnataka public health act vide Govt. Notification No:HFW/30/SMM/98.Dt:13.03.1998)) ಡೆಂಗ್ಯೂ ಜ್ವರದ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಖಾಸಗಿ ಆರೋಗ್ಯ ಸಂಸ್ಥೆಗಳೂ ಸಹ ಡೆಂಗ್ಯೂ ಪ್ರಕರಣಗಳ ಮಾಹಿತಿಯನ್ನು ಆರೋಗ್ಯ ಇಲಾಖೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

2. ಮುಂಗಾರು ಪೂರ್ವ, ಮುಂಗಾರು ಹಾಗೂ ಮುಂಗಾರಿನ ನಂತರದ ದಿನಗಳಲ್ಲಿ ಡೆಂಗ್ಯೂ ಜ್ವರ ಪ್ರಸರಣವು ಅಧಿಕವಾಗುವ ಹಿನ್ನಲೆಯಲ್ಲಿ ವರ್ಷದ ಆರಂಭದಲ್ಲಿಯೇ, ಬೆಂಗಳೂರು ನಗರ ಸೇರಿದಂತೆ, ಎಲ್ಲಾ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಿಗೆ ಮಾರ್ಗಸೂಚಿ ಸುತ್ತೋಲೆಯನ್ನು ಕಳುಹಿಸಿದ್ದು, ಡೆಂಗ್ಯೂ ನಿಯಂತ್ರಣಕ್ಕೆ ಸನ್ನದ್ಧ ಸ್ಥಿತಿಯಲ್ಲಿರಲು ಸೂಚಿಸಲಾಗಿದೆ.

3. ಪ್ರವಾಹ ಹಾಗೂ ನಂತರದ ಸಮಯದಲ್ಲಿ ಈಡಿಸ್ ಸೊಳ್ಳೆಗಳ ಉತ್ಪತ್ತಿತಾಣ ನಾಶ ಹಾಗೂ ಡೆಂಗ್ಯೂ ನಿಯಂತ್ರಣದ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಕುರಿತು ಮಾರ್ಗದರ್ಶಿ ಸುತ್ತೋಲೆಗಳನ್ನು ಎಲ್ಲಾ ಜಿಲ್ಲೆಗಳಿಗೆ ನೀಡಲಾಗಿದೆ.

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:07-06-2024 ರಂದು ಅಂತರ್ ಇಲಾಖಾ ಸಮನ್ವಯ ಸಭೆಯನ್ನು ನಡೆಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಇಲಾಖೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೃಷಿ, ಮೀನುಗಾರಿಕೆ, ಸಾರಿಗೆ ಇಲಾಖೆ ಇತ್ಯಾದಿಗಳ ಇಲಾಖೆಯ ಮುಖ್ಯಸ್ಥರೊಂದಿಗೆ ಸಭೆ ನಡೆಸಿ, ಡೆಂಗ್ಯೂ ಜ್ವರ ನಿಯಂತ್ರಣದಲ್ಲಿ, ಎಲ್ಲಾ ಇಲಾಖೆಗಳು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಲು ಸೂಚಿಸಲಾಗಿದೆ. ರಾಜ್ಯದಲ್ಲಿ ಅತಿಹೆಚ್ಚು ಡೆಂಗ್ಯೂ ಜ್ವರ ಪ್ರಕರಣಗಳು ವರದಿಯಾಗಿರುವ (ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಹಾವೇರಿ) ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ನಿಯಂತ್ರಣ ಕ್ರಮಗಳನ್ನು ಸಮರೋಪಾಧಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

5. ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆ ದಿನಾಂಕ:25.06.2024ರಂದು, ವರ್ಚುಯಲ್ ಮೂಲಕ ಜಿಲ್ಲಾ ಆರೋಗ್ಯ ಮತ್ತು ಕುಕ ಅಧಿಕಾರಿಗಳು ಮತ್ತು ಡಿವಿಬಿಡಿಸಿಓಗಳ ಸಭೆ ನಡೆಸಿ ಡೆಂಗ್ಯೂ ಜ್ವರ ನಿಯಂತ್ರಿಸಲು ಸಲಹೆಯನ್ನು ನೀಡಿರುತ್ತಾರೆ.

6. ದಿನಾಂಕ: 25-06-2024ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಸಮನ್ವಯ ಸಭೆಯನ್ನು ನಡೆಸಿ ರಾಜ್ಯಾದ್ಯಂತ ಪ್ರತಿ ಶುಕ್ರವಾರ "ಲಾರ್ವಾ ನಿರ್ಮೂಲನ ದಿನ"ವನ್ನು ಆಚರಿಸಲು ಮಾನ್ಯ ಮುಖ್ಯ ಮಂತ್ರಿಯವರು ಸಲಹೆ ನೀಡಿರುತ್ತಾರೆ.

7. ದಿನಾಂಕ:02-07-2024ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ಅಂತರ್ ಇಲಾಖಾ ಸಮನ್ವಯ ಸಭೆಯನ್ನು ಏರ್ಪಡಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

ವೈದ್ಯಕೀಯ ಶಿಕ್ಷಣ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್, ನಗರ ಅಭಿವೃದ್ಧಿ ಇಲಾಖೆ, ಪೌರಾಡಳಿತ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗು ಇತ್ಯಾದಿ ಇಲಾಖೆಗಳೊಂದಿಗೆ ಸಭೆ ನಡೆಸಿ, ಡೆಂಗ್ಯೂ ಜ್ವರ ನಿಯಂತ್ರಿಸಲು ತಮ್ಮ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಶೀಘ್ರವೇ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

**8.** ದಿನಾಂಕ: 04-07-2024ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯಾದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವರ್ಚುಯಲ್ ಸಭೆನಡೆಸಿ, ಜಿಲ್ಲಾಧಿಕಾರಿಗಳಿಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಪ್ರತಿ ಶುಕ್ರವಾರ ತಮ್ಮ ತಮ್ಮ ಇಲಾಖೆಯ ಕಛೇರಿಗಳಲ್ಲಿ ಲಾರ್ವಾ ನಿರ್ಮೂಲನ ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡು ಲಾರ್ವಾ ನಾಶಪಡಿಸಿ ಡೆಂಗ್ಯೂ ಜ್ವರ ಹರಡದಂತೆ ಕ್ರಮಕೈಗೊಳ್ಳಲು ಸೂಚಿಸಿದರು.

**9.** ದಿನಾಂಕ: 08-07-2024 ಮತ್ತು 09-07-2024ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಮತ್ತು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಣಧಿಕಾರಿಗಳ ಸಭೆಯನ್ನು ನಡೆಸಿ ಡೆಂಗ್ಯೂ ನಿಯಂತ್ರಣಕ್ಕೆ ಎಲ್ಲಾ ಇಲಾಖೆಗಳ ಸಮನ್ವಯತೆಯೊಂದಿಗೆ ಸಮರೋಪಾಧಿಯಲ್ಲಿ ಡೆಂಗ್ಯೂ ಜ್ವರ ಹರಡದಂತೆ ಎಲ್ಲಾ ನಿಯಂತ್ರಣ ಕ್ರಮಗಳನ್ನು ಹಾಗೂ ಎಲ್ಲರಿಗೂ ಸೂಕ್ತ ಚಿಕಿತ್ಸೆ ದೊರೆಯುವಂತೆ ಮತ್ತು ಮರಣ ಪ್ರಕರಣಗಳು ಸಂಭವಿಸದಂತೆ ಸೂಕ್ತ ಕ್ರಮಕೈಗೊಂಡು ಕ್ಷಿಪ್ರ ಕಾರ್ಯಾಚರಣೆ ಪಡೆಯನ್ನು ತಮ್ಮ ತಮ್ಮ ಜಿಲ್ಲೆಯಲ್ಲಿ ರಚಿಸಿ, ಡೆಂಗ್ಯೂ ಕಂಡು ಬಂದ ಗ್ರಾಮಗಳಿಗೆ ಶೀಘ್ರವೇ ಭೇಟಿನೀಡಿ ನಿಯಂತ್ರಣ ಕ್ರಮಕೈಗೊಳ್ಳಲು ಸೂಚಿಸಿದರು. ಪ್ರತಿ ಶುಕ್ರವಾರ ಎಲ್ಲಾ ಜಿಲ್ಲಾಧಿಕಾರಿಗಳು ಸೇರಿದಂತೆ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಪ್ಪದೇ ಲಾರ್ವಾ ನಿರ್ಮೂಲನ ದಿನವನ್ನು ನಡೆಸಲು ಸೂಚಿಸಿರುತ್ತಾರೆ.

**10.** ಡೆಂಗ್ಯೂ ರೋಗದ ಶೀಘ್ರ ಪತ್ತೆಗಾಗಿ ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರು ಮನೆಮನೆಗೆ ಭೇಟಿ ನೀಡಿ ಜ್ವರ ಸಮೀಕ್ಷಾ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಇದೇ ಸಮಯದಲ್ಲಿ ಡೆಂಗ್ಯೂ ಜ್ವರದ ಲಕ್ಷಣಗಳು ಹಾಗೂ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣ ಮತ್ತು ಅವುಗಳ ನಿರ್ಮೂಲನೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿ ಅರಿವು ಮೂಡಿಸುತ್ತಿದ್ದಾರೆ.

**11.** ಹೆಚ್ಚು ಜ್ವರ ಪ್ರರಕರಣಗಳು ವರದಿಯಾಗುತ್ತಿರುವ ಸ್ಥಳಗಳಲ್ಲಿ ಫೀವರ್ ಕ್ಲಿನಿಕ್ ಸ್ಥಾಪಿಸಿ, ಡೆಂಗ್ಯೂ ರೋಗವನ್ನು ಪತ್ತೆ ಹಚ್ಚುವ ಮತ್ತು ಚಿಕಿತ್ಸೆ ನೀಡುವ ಕಾರ್ಯವನ್ನು ಮಾಡಲಾಗುತ್ತಿದೆ.

**12.** ಶಂಕಿತ ಡೆಂಗ್ಯೂ ಪ್ರಕರಣಗಳ ರಕ್ತದ ಮಾದರಿಗಳನ್ನು ಸೆಂಟಿನಲ್ ಪ್ರಯೋಗಾಲಯಗಳಲ್ಲಿ ಉಚಿತವಾಗಿ ಪರೀಕ್ಷಿಸಲಾಗುತ್ತಿದೆ. ಇದಕ್ಕಾಗಿ, ಅಗತ್ಯವಿರುವ ELISA ಆಧಾರಿತ ಎನ್‌ಎಸ್1 ಹಾಗೂ ಐ ಜಿ ಎಂ ಕಿಟ್ಟುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಎಲ್ಲಾ ಪ್ರಯೋಗಾಲಯಗಳಿಗೆ ಸರಬರಾಜು ಮಾಡಲಾಗಿದೆ.

13. ಬಿಬಿಎಂಪಿ ವ್ಯಾಪ್ತಿಯಲ್ಲಿನ ನಗರ ಆರೋಗ್ಯ ಕೇಂದ್ರಗಳಲ್ಲಿ ಸಂಗ್ರಹ ಮಾಡಿದ ಶಂಕಿತ ಡೆಂಗ್ಯೂ ರಕ್ತ ಮಾದರಿಗಳನ್ನು ಹೆಚ್.ಸಿದ್ದಯ್ಯ ರಸ್ತೆಯಲ್ಲಿರುವ ಆಸ್ಪತ್ರೆಯಲ್ಲಿನ ಎಸ್ಎಸ್ ಎಲ್ ಪ್ರಯೋಗ ಶಾಲೆಯಲ್ಲಿ ಪರೀಕ್ಷೆ ಮಾಡಲಾಗುತ್ತಿದೆ.

14. ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಡೆಂಗ್ಯೂ ಜ್ವರ ಪ್ರಕರಣಗಳ ನಿರ್ವಹಣೆ ಮತ್ತು ರೋಗ ಲಕ್ಷಣಗಳಿಗೆ ಅನುಗುಣವಾದ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ವಾರ್ಡ್‌ಗಳ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಡೆಂಗ್ಯೂ ಜ್ವರಕ್ಕೆ ಬೇಕಾದ ನಿರ್ವಹಣಾ ವ್ಯವಸ್ಥೆಯನ್ನು ಸಹ ಒದಗಿಸಲಾಗಿದೆ. ಡೆಂಗ್ಯೂ ರೋಗ ನಿರ್ವಹಣೆಗೆ ಬೇಕಾಗುವ ಜೀವರಕ್ಷಕ ಔಷಧಿಗಳು ಮತ್ತು ರೋಗ ಲಕ್ಷಣಗಳಿಗೆ ಅನುಗುಣವಾಗಿ ಬೇಕಾದ ಔಷಧೋಪಚಾರಗಳನ್ನು ತಾಲ್ಲೂಕು ಹಾಗು ಜಿಲ್ಲಾ ಮಟ್ಟದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇರಿಸಲಾಗಿದೆ.

15. ಡೆಂಗ್ಯೂ ರಕ್ತ ಸ್ರಾವಜ್ವರ (ಡೆಂಗ್ಯೂ ಹೆಮರೇಜಿಕ್ ಫೀವರ್) ನಿರ್ವಹಣೆಗಾಗಿ, ಜಿಲ್ಲಾ ಮಟ್ಟದಲ್ಲಿ Blood componentಗಳ ಲಭ್ಯತೆಯ ಬಗ್ಗೆ ಇಲಾಖೆಯ ಅಂತರ್ಜಾಲದಲ್ಲಿ ಅಪ್ ಲೋಡ್ ಮಾಡಲಾಗಿದೆ ಹಾಗೂ ಈ ಮಾಹಿತಿಯನ್ನು ಪ್ರತಿ ದಿನವು ಪರಿಷ್ಕರಿಸಿ ಪ್ರಕಟಿಸಲಾಗುತ್ತಿದೆ. (ಇ-ರಕ್ತಕೋಶ್, e- aktkosh)

16. ಡೆಂಗ್ಯೂ ಖಚಿತ ಪಡಿಸಿಕೊಳ್ಳಲು ಎಲಿಸಾ ಆಧಾರಿತ NS1 & IgM ಪರೀಕ್ಷೆಗೆ ತಲಾ ರೂ. 300/- ಮೀರದಂತೆ ಹಾಗೂ Screening testಗಳಿಗೆ ( NS1, IgM & IgG) ರೂ 250/-ಗಳ ಶುಲ್ಕವನ್ನು ಖಾಸಗಿ ಆಸ್ಪತ್ರೆ ಹಾಗೂ ಖಾಸಗಿ ಪ್ರಯೋಗಶಾಲೆಗಳಿಗೆ ನಿಗದಿಗೊಳಿಸಲಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಪರೀಕ್ಷಿಸಲಾಗುತ್ತಿದೆ.

17. ರಾಜ್ಯ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ, "ವಿಬಿಡಿ ಮರಣ ತಪಾಸಣಾ ಸಮಿತಿ" (VBD Death Audit committee)ಯನ್ನು ರಚಿಸಲಾಗಿದ್ದು, ಈ ಸಮಿತಿಯು ಶಂಕಿತ ಡೆಂಗ್ಯೂ ರೋಗದಿಂದ ಸಂಭವಿಸಿರಬಹುದಾದ ಎಲ್ಲಾ ಮರಣ ಪ್ರಕರಣಗಳ ವರದಿಗಳನ್ನು ಪರಿಶೀಲಿಸಿ ನಂತರ ದೃಢೀಕರಿಸಲಾಗುತ್ತಿದೆ.

18. ಡೆಂಗ್ಯೂ ನಿಯಂತ್ರಣಕ್ಕೆ ಈಡಿಸ್ ಸೊಳ್ಳೆಗಳ ಉತ್ಪತ್ತಿ ತಾಣ ನಾಶವು ಪ್ರಮುಖವಾಗಿರುವುದರಿಂದ, ಆರೋಗ್ಯ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತರು ಪ್ರತಿ ಮನೆಯ ಒಳಾಂಗಣ ಮತ್ತು ಹೊರಾಂಗಣದಲ್ಲಿನ ನೀರಿನ ಶೇಖರಣೆಗಳಲ್ಲಿ ಈಡೀಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಪತ್ತೆಹಚ್ಚಿ, ಅವುಗಳ ನಿರ್ಮೂಲನೆಗೆ ಕ್ರಮಕೈಗೊಳ್ಳುತ್ತಿದ್ದಾರೆ.

19. ಈಡಿಸ್ ಲಾರ್ವಾ ಸಮೀಕ್ಷೆ ಹಾಗೂ ಉತ್ಪತ್ತಿ ತಾಣ ನಾಶ ಚಟುವಟಿಕೆಗೆ ಅಗತ್ಯವಿರುವ ಟೆಮಿಫಾಸ್ ದ್ರಾವಣ ಹಾಗೂ ತುರ್ತು ಸಂದರ್ಭಗಳಲ್ಲಿ ಒಳಾಂಗಣ ಧೂಮೀಕರಣಕ್ಕೆ ಬಳಸುವ ಪೈರಿಥ್ರಮ್ ಎಕ್ಸ್ಟ್ರ್ಯಾಕ್ಟ್ ರಾಸಾಯನಿಕಗಳ ಅಗತ್ಯ ದಾಸ್ತಾನು ಲಭ್ಯವಿದ್ದು ಸಮರ್ಪಕವಾಗಿ ಬಳಸಲಾಗುತ್ತಿದೆ.

20. ಪ್ರತಿ ಆಶಾ ಕಾರ್ಯಕರ್ತೆಯರಿಗೆ ಲಾರ್ವಾ ಸಮೀಕ್ಷೆ ನಡೆಸಲು ಗೌರವಧನ ರೂ. 200/-ಗಳನ್ನು ಪ್ರತಿ ತಿಂಗಳು ನೀಡಲಾಗುತ್ತಿದೆ. ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳಿಗೆ ಪ್ರತಿ ತಿಂಗಳು ರೂ. 300/-ಗಳನ್ನು ನೀಡಲಾಗುತ್ತಿದೆ.

21. ಸಹ ನಿರ್ದೇಶಕರು-ಎನ್‌ವಿಬಿಡಿಸಿಪಿ, ಇವರ ಅಧ್ಯಕ್ಷತೆಯಲ್ಲಿ ವಲಯವಾರು ಸಭೆಯನ್ನು ಪ್ರತಿ ವಾರಕ್ಕೊಮ್ಮೆ ವರ್ಚುವಲ್ ಮಾಧ್ಯಮದ ಮೂಲಕ ನಡೆಸಲಾಗುತ್ತಿದ್ದು, ಬಿಬಿಎಂಪಿ ಸೇರಿದಂತೆ ಜಿಲ್ಲಾವಾರು ಡೆಂಗ್ಯೂ ಪರಿಸ್ಥಿತಿಯನ್ನು ವಿಶ್ಲೇಷಿಸಿ, ನಿಯಂತ್ರಣಕ್ಕಾಗಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ.

22. ಬಿಬಿಎಂಪಿ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಡೆಂಗ್ಯೂ ಪ್ರಕರಣಗಳ ಮಾಹಿತಿಯನ್ನು IHIP-Portal ಮೂಲಕ ಪಡೆಯಲಾಗುತ್ತಿದ್ದು, ವಿವರವನ್ನು ಸಂಬಂಧಪಟ್ಟ ವಾರ್ಡ್ ವೈದ್ಯರೊಂದಿಗೆ ಹಂಚಿಕೊಂಡು ತುರ್ತಾಗಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

23. ರಾಜ್ಯದ ದೈನಂದಿನ ಡೆಂಗ್ಯೂ ಜ್ವರ ಪರಿಸ್ಥಿತಿಯ ಸೂಕ್ಷ್ಮ ಮೇಲ್ವಿಚಾರಣೆ ಹಾಗೂ ಉಸ್ತುವಾರಿಗಾಗಿ NVBDCP ವಿಭಾಗದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಬೆಂಗಳೂರು ಇಲ್ಲಿ ಡೆಂಗ್ಯೂ ವಾರ್ ರೂಮ್ ಅನ್ನು ಸಕ್ರಿಯಗೊಳಿಸಲಾಗಿದೆ. ಅಲ್ಲದೇ, ಎಲ್ಲಾ ಜಿಲ್ಲೆಗಳು ಹಾಗೂ BBMP ಜ್ವರ ಪರಿಸ್ಥಿತಿಯ ಮೇಲ್ವಿಚಾರಣೆ ಹಾಗೂ ದತ್ತಾಂಶ/ಮಾಹಿತಿ ಸಂಗ್ರಹಣೆಗಾಗಿ ಕಂಟ್ರೋಲ್ ರೂಮ್/ಡೆಂಗ್ಯೂ ವಾರ್ ರೂಮ್ ಅನ್ನು ಸಕ್ರಿಯಗೊಳಿಸಲಾಗಿದೆ.

24. ಡೆಂಗ್ಯೂ ಪರಿಸ್ಥಿತಿಯ ದೈನಂದಿನ ನಿಗಾವಣೆಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಅನ್ನು ರಚಿಸಲಾಗಿದ್ದು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು - ಜಿಲ್ಲಾ ಪಂಚಾಯತಿ, ಪ್ರಾಜೆಕ್ಟ್ ಡೈರೆಕ್ಟರ್ - ನಗರಾಭಿವೃದ್ಧಿ, ವಿಭಾಗ ಮುಖ್ಯಸ್ಥರು-P & SM, ಮೆಡಿಕಲ್ ಕಾಲೇಜು, ಜಿಲ್ಲಾ ಆರೋಗ್ಯಾಧಿಕಾರಿಗಳು, ಜಿಲ್ಲಾಧ್ಯಕ್ಷರು IMA & IAP, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ, ಇವರುಗಳು ಸದರಿ ಟಾಸ್ಕ್ ಫೋರ್ಸ್ ಸದಸ್ಯರಾಗಿರುತ್ತಾರೆ ಹಾಗೂ ಜಿಲ್ಲಾ ವಿಬಿಡಿ ನಿಯಂತ್ರಣಾಧಿಕಾರಿಗಳು, ಜಿಲ್ಲಾ ಟಾಸ್ಕ್ ಫೋರ್ಸ್ ನ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ವಾರಕ್ಕೊಮ್ಮೆ ಟಾಸ್ಕ್ ಫೋರ್ಸ್ ಸಭೆ ಸೇರಿ, ಡೆಂಗ್ಯೂ ಜ್ವರ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ, ಸ್ಥಳೀಯ ಡೆಂಗಿ ಪರಿಸ್ಥಿತಿಯ ಅನ್ವಯ ಅಗತ್ಯ ಸಲಹೆ ಸೂಚನೆಗಳನ್ನು ನೀಡುತ್ತಾರೆ.

25. ಬಿಬಿಎಂಪಿ ಮತ್ತು ಎಲ್ಲಾ ಜಿಲ್ಲೆಗಳು Hotspot ಅನ್ನು ಗುರುತಿಸಿ (Hotspot : an area with radius of about 100 meters within which two or more dengue positive cases have been reported), Hotspotಗಳ ನಿಖರ ಮಾಹಿತಿ (ಗ್ರಾಮ/ಸ್ಥಳ/-ವಾರ್ಡ್)ಯನ್ನು ನಿಗದಿತ ನಮೂನೆಯಲ್ಲಿ State War Roomಗೆ ಸಲ್ಲಿಸುವಂತೆ ಸೂಚಿಲಾಗಿದೆ.

26. ಸದರಿ Hotspotಗಳಲ್ಲಿ ಲಾರ್ವಾ, ನಾಶ ಚಟುವಟಿಕೆಯನ್ನು ತೀವ್ರಗೊಳಿಸುವುದು, ಒಳಾಂಗಣ/ಹೊರಾಂಗಣದಲ್ಲಿ ಲಾರ್ವಾನಾಶಕಗಳ ಬಳಕೆ ಹಾಗೂ ಒಳಾಂಗಣದಲ್ಲಿ indoor space sparyಯನ್ನು ಕೈಗೊಂಡು ಮನೆಯ ಸದಸ್ಯರನ್ನು ಕನಿಷ್ಟ 30 ನಿಮಿಷಗಳ ಕಾಲ ಮನೆಗಳಿಂದ ಹೊರಗೆ ಇರುವಂತೆ ಸೂಚಿಸಲಾಗಿದೆ. ಸದರಿ ಸ್ಥಳಗಳಲ್ಲಿ Fever clinicಗಳನ್ನು ಸಕ್ರಿಯಗೊಳಿಸಲಾಗಿದೆ.

27. ಈ ಪ್ರದೇಶಗಳಲ್ಲಿ, ಬಿಪಿಎಲ್ ಕುಟುಂಬಗಳಿಗೆ ಸೊಳ್ಳೆ ನಿರೋಧಕ ಬೇವಿನ ಎಣ್ಣೆಯ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಕೈ-ಕಾಲು, ಹಾಗೂ ಕುತ್ತಿಗೆಯ ಭಾಗದಲ್ಲಿ ಹಚ್ಚಿಕೊಳ್ಳುವಂತೆ ತಿಳಿಸಲಾಗಿದೆ.

**a)** ಸದರಿ ಉತ್ಪನ್ನವು ಲಭ್ಯವಿಲ್ಲದಿದ್ದಲ್ಲಿ, Citronella oil/ lemon grass oilಗಳನ್ನು ಅಥವಾ DEET (N,N-diethyl-meta-toluamide) ಆಧಾರಿತ ಕ್ರೀಂಗಳ ವಿತರಣೆಯನ್ನು ಸ್ಥಳೀಯ ಜಿಲ್ಲಾ ಆರೋಗ್ಯಾಧಿಕಾರಿಗಳು/ಮುಖ್ಯ ಸಾರ್ವಜನಿಕ ಆರೋಗ್ಯಾಧಿಕಾರಿಗಳು-ಸಾರ್ವಜನಿಕ ಆರೋಗ್ಯ, ಬಿಬಿಎಂಪಿ ಇವರು ಪರಿಗಣಿಸಬಹುದಾಗಿದೆ.

**b)** ಸದರಿ ಸೊಳ್ಳೆ ನಿರೋಧಕ ಎಣ್ಣೆ/ಕ್ರೀಂ ಗಳನ್ನು ನಿಯಮಾನುಸಾರ ಸ್ಥಳೀಯವಾಗಿ ಖರೀದಿಸಲು CSR/ದಾನಿಗಳ ವಂತಿಕೆಯನ್ನು ಅಥವಾ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ/ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ARS/ A bar- K ಅನುದಾನವನ್ನು ನಿಯಮಾನುಸಾರ ಬಳಸುವಂತೆ ಹಾಗೂ ಹೆಚ್ಚುವರಿ ಅನುದಾನದ ಬೇಡಿಕೆಯನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ ಗಳು ಭರಿಸುವಂತೆ ಸೂಚಿಸಲಾಗಿದೆ.

**c)** ಸೊಳ್ಳೆ ನಿರೋಧಕ ಎಣ್ಣೆ/ಕ್ರೀಂ ಗಳನ್ನು ಪಡೆದ ಮನೆಯ ಸದಸ್ಯರ ಹೆಸರು, ರೇಷನ್ ಕಾರ್ಡ್ ಸಂಖ್ಯೆ, ಮೊಬೈಲ್ ಸಂಖ್ಯೆ ಇತ್ಯಾದಿ ಅಗತ್ಯ ಮಾಹಿತಿಯನ್ನು ಒಳಗೊಂಡ ದಾಖಲೆಗಳನ್ನು ನಿರ್ವಹಿಸುವಂತೆ ಸೂಚಿಸಲಾಗಿದೆ.

**d)** ಪ್ರತಿ ಡೆಂಗ್ಯೂ ಜ್ವರ ಪ್ರಕರಣವನ್ನು, ರೋಗ ಲಕ್ಷಣಗಳು ಕಂಡು ಬಂದ ದಿನದಿಂದ, ಸದರಿಯವರ ಆರೋಗ್ಯ ಸ್ಥಿತಿಯ ಕುರಿತು 14 ದಿನಗಳು ಅನುಪಾಲನ ಮಾಡುವುದು ಹಾಗೂ ನಿಗದಿತ ವರದಿ ನಮೂನೆಯಲ್ಲಿ State War Roomಗೆ ವರದಿಯನ್ನು ಸಲ್ಲಿಸುವುದು. ಇಂತಹ ಡೆಂಗ್ಯೂ ಪ್ರಕರಣಗಳಿಗೆ, ಸಾಧಾರಣ ಡೆಂಗ್ಯೂ ಜ್ವರವು ಮಧ್ಯಮ / ತೀವ್ರ ಡೆಂಗ್ಯೂ ಜ್ವರವಾಗಿ ಪರಿಣಮಿಸುವಲ್ಲಿ ಕಂಡುಬರುವ ಅಪಾಯದ ಚಿನ್ನೆಗಳ (early warning signs) ಕುರಿತು ಶಿಕ್ಷಣ ನೀಡುವುದು. Hotspotನಿಂದ ಹೊರಗಿರುವ ಡೆಂಗ್ಯೂ ಜ್ವರ ಪ್ರಕರಣಗಳಿಗೂ ಸಹ ಈ ನಿರ್ದೇಶನವನ್ನು ಅನುಪಾಲನೆ ಮಾಡುವುದು ಕಡ್ಡಾಯವಾಗಿದೆ.

**28.** ಡೆಂಗ್ಯೂ ಜ್ವರ ಪ್ರಕರಣಗಳ ನಿರ್ವಹಣೆಗಾಗಿ ತಾಲ್ಲೂಕು ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಕನಿಷ್ಠ ತಲಾ 5 ಹಾಗೂ 8-10 ಬೆಡ್ ಗಳನ್ನು ಮೀಸಲಿಡುವಂತೆ ಹಾಗೂ ಈ ಸಂಖ್ಯೆಯ ಡೆಂಗ್ಯೂ ಜ್ವರ ಪ್ರಕರಣಗಳಿಲ್ಲದಿದ್ದಲ್ಲಿ, ಸದರಿ ಬೆಡ್ ಗಳನ್ನು ಇತರೆ ರೋಗಿಗಳ ಆರೈಕೆಗೆ ಬಳಸುವಂತೆ ಸೂಚಿಸಲಾಗಿದೆ.

**29.** ಡೆಂಗ್ಯೂ ಜ್ವರ ಪ್ರಕರಣಗಳ ಪರೀಕ್ಷೆ, ಚಿಕಿತ್ಸೆ ಹಾಗೂ ನಿರ್ವಹಣೆಯ ಸೌಲಭ್ಯಗಳನ್ನು (ICU ಸೇರಿದಂತೆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಂಪೂರ್ಣ ಉಚಿತವಾಗಿ ಒದಗಿಸುವಂತೆ ಸೂಚಿಸಲಾಗಿದೆ (BPL & APL ವರ್ಗದವರಿಗೆ).

**30.** ಡೆಂಗಿ ಜ್ವರ ನಿರ್ವಹಣೆಯ ಸಂಬಂಧ National Guidelines on Dengue fever management (as specified in GoI 2023 guidelines) ಕಡ್ಡಾಯವಾಗಿ ಎಲ್ಲಾ ವೈದ್ಯರು ಪಾಲಿಸುವುದು. ಮುಂದುವರೆದು, Tele ICU ಸೌಲಭ್ಯವಿದ್ದಲ್ಲಿ ಡೆಂಗಿ ಜ್ವರ ಪ್ರಕರಣಗಳನ್ನು ಮೇಲ್ವಿಚಾರಣೆಯನ್ನು ಮಾಡುವಂತೆ ಸೂಚಿಸಲಾಗಿದೆ.

**ಡೆಂಗ್ಯೂ ನಿಯಂತ್ರಣದ ನಿಟ್ಟಿನಲ್ಲಿ ಅನುಷ್ಠಾನಗೊಳಿಸಿರುವ ಆರೋಗ್ಯ ಶಿಕ್ಷಣ ಚಟುವಟಿಕೆಗಳು:-**

ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ಸಂವಹನ ಚಟುವಟಿಕೆಗಳ ಮೂಲಕ ಸಮುದಾಯದಲ್ಲಿ ಉತ್ತಮ ಜಾಗೃತಿ ಮೂಡಿಸಲು ಸ್ಥಳೀಯ ಭಾಷೆಗಳಿಗನುಗುಣವಾಗಿ IEC ಚಟುವಟಿಕೆಗಳನ್ನು IPC, Mid Media, Social Media, News Media, Mass Media, Digital Mediaಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ.

1. ಡೆಂಗ್ಯೂ ಜ್ವರ ನಿಯಂತ್ರಣಕ್ಕಾಗಿ ಪ್ರತೀ ವರ್ಷ ಮೇ 16ರಂದು ರಾಷ್ಟ್ರೀಯ ಡೆಂಗ್ಯೂ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಜ್ಯ, ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮವಾರು ಆಚರಿಸಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.

2. ಜುಲೈ ಮಾಹೆಯನ್ನು ಡೆಂಗ್ಯೂ ವಿರೋಧಿ ಮಾಸವನ್ನಾಗಿ ಆಚರಿಸಲಾಗುತ್ತಿದೆ.

3. ಈ ಸಂದರ್ಭದಲ್ಲಿ, ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ನಡೆದ ಸಂದರ್ಶನದಲ್ಲಿ ಹಾಗೂ ಫೋನ್‌ಇನ್ ನೇರ ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡು, ಅಗತ್ಯ ಮಾಹಿತಿಯನ್ನು ಹಾಗೂ ಡೆಂಗ್ಯೂ ನಿಯಂತ್ರಣದಲ್ಲಿ ಸಮುದಾಯದ ಪಾತ್ರದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿರುತ್ತಾರೆ.

4. ಶಾಲಾ ಶಿಕ್ಷಕರುಗಳಿಗೆ ಡೆಂಗ್ಯೂ ನಿಯಂತ್ರಣ ಮತ್ತು ಮುಂಜಾಗ್ರತೆ ಬಗ್ಗೆ ಅಡ್ವೋಕೆಸಿ ಕಾರ್ಯಗಾರವನ್ನು ನಡೆಸಲಾಗಿದೆ. ರಾಜ್ಯ ಮಟ್ಟ, ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟದಲ್ಲಿ ಅರಿವು ಮೂಡಿಸಲಾಗಿದೆ ಅದರಂತೆ ತರಬೇತಿ ಹೊಂದಿದ ವಿಜ್ಞಾನ ಶಿಕ್ಷಕರು ಮಕ್ಕಳಿಗೆ ಡೆಂಗ್ಯೂ ಬಗ್ಗೆ ಅರಿವು ಮೂಡಿಸಿ ಸಾರ್ವಜನಿಕರ ಪಾತ್ರದ ಬಗ್ಗೆಯೂ ತಿಳಿಸಿರುತ್ತಾರೆ.

5. ಗ್ರಾಮ/ವಾರ್ಡ್ ಮಟ್ಟದಲ್ಲಿ ಅಡ್ವೋಕೆಸಿ ಕಾರ್ಯಗಾರಗಳನ್ನು ಗ್ರಾಮದ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಶಾಲಾ ಶಿಕ್ಷಕರು ಅಂಗನವಾಡಿ ಕಾರ್ಯಕರ್ತೆಯರು, ಸ್ತ್ರೀ ಶಕ್ತಿ ಸಂಘದ ಪದಾಧಿಕಾರಿಗಳು, ಸ್ವಯಂ ಸೇವಕರು, ಹಾಲು ಉತ್ಪಾದಕರ ಸಂಘದ ಸದಸ್ಯರುಗಳು, (ಧಾರ್ಮಿಕ ಮುಖಂಡರು ಒಳಗೊಂಡಂತೆ) ನಡೆಸಲಾಗುತ್ತಿದೆ.

6. ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿ.ಡಿ.ಓ) ಅಡ್ವೋಕೆಸಿ ಕಾರ್ಯಗಾರಗಳನ್ನು ಹಮ್ಮಿಕೊಂಡು ತರಬೇತಿ ನೀಡಲಾಗಿದ.

7. ದಿನ ಪತ್ರಿಕೆಗಳಲ್ಲಿ ಡೆಂಗ್ಯೂ ಜ್ವರ- ನಿರ್ವಹಣೆ - ನಿಯಂತ್ರಣ ಕುರಿತು ಜಾಹಿರಾತು ಮೂಲಕ ಪ್ರಚುರ ಪಡಿಸಲಾಗಿದೆ.

8. ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಮತ್ತು ಮಾನ್ಯ ಆರೋಗ್ಯ ಸಚಿವರಿಂದ ಡೆಂಗ್ಯೂ ಜ್ವರ ಮತ್ತು ನಿಯಂತ್ರಣ ಕುರಿತು ಸಾರ್ವಜನಿಕರಿಗೆ ವಿಡಿಯೋ ಸಂದೇಶವನ್ನು ಎಲ್ಲಾ ಸಾಮಾಜಿಕ ಜಾಲತಾಣದಲ್ಲಿ ಪ್ರಚುರಗೊಳಿಸಲಾಗಿದೆ.

9. ಮಾನ್ಯ ಆರೋಗ್ಯ ಸಚಿವರು ಪ್ರತಿ ಶುಕ್ರವಾರ - "ಲಾರ್ವಾ ನಿರ್ಮೂಲನ ದಿನ" ವನ್ನು ಆಚರಿಸುವ ಕಾರ್ಯಕ್ರಮವನ್ನು ದಿನಾಂಕ:28-06-2024 ರಂದು ಬಾಗಲಕೋಟೆ ಜಿಲ್ಲೆಯಲ್ಲಿ ಚಾಲನೆ ಮಾಡಿರುತ್ತಾರೆ.

10. ಪ್ರತಿ ಶುಕ್ರವಾರ – 'ಲಾರ್ವಾ ನಿರ್ಮೂಲನ ದಿನ' ವನ್ನು ಆಚರಿಸಲಾಗುತ್ತಿದ್ದು ಆ ದಿನದಂದು ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ತಮ್ಮ ತಮ್ಮ ವ್ಯಾಪ್ತಿಯ ಮನೆ- ಕಛೇರಿ- ಶಾಲಾ-ಕಾಲೇಜು, ಸಂಸ್ಥೆಗಳು, (ಸರ್ಕಾರಿ ಹಾಗೂ ಖಾಸಗಿ) ಈಡೀಸ್ ಲಾರ್ವಾ ಉತ್ಪತ್ತಿ ತಾಣಗಳನ್ನು ನಾಶಪಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.

11. ಡೆಂಗ್ಯೂ ಜ್ವರ ಹೆಚ್ಚು ಕಂಡುಬಂದ ಪ್ರದೇಶಗಳಲ್ಲಿ ಜ್ವರ ಚಿಕಿತ್ಸಾ ಕೇಂದ್ರವನ್ನುತೆ ರದು ಡೆಂಗ್ಯೂ ಜ್ವರದ ಚಿಕಿತ್ಸೆ ನೀಡಿ-ನಿರ್ವಹಣೆ-ನಿಯಂತ್ರಣ ಕುರಿತು ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

12. ಪ್ರದರ್ಶನ ಫಲಕಗಳೊಂದಿಗೆ (ಪ್ಲೆಕಾರ್ಡ್) ಜಾಥಾ ಕಾರ್ಯಕ್ರಮ ಹಾಗೂ ವಸ್ತು ಪ್ರದರ್ಶನ ಮಾಡಲಾಗುತ್ತಿದೆ.

13. ಹೋರ್ಡಿಂಗ್‌ಗಳು, ಬ್ಯಾನರ್‌ಗಳು. ಪೋಸ್ಟರ್‌ಗಳನ್ನು (ಜನಜಂಗುಳಿ ಪ್ರಮುಖ ಸ್ಥಳಗಳು) ಅಳವಡಿಸಲಾಗುತ್ತಿದೆ.

14. ಮುದ್ರಿತ ವಸ್ತುಗಳು ಮೂಲಕ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. (ಕರಪತ್ರ. ಮಡಿಕಪತ್ರ, ಭಿತ್ತಿ ಪತ್ರಗಳು, ಇತ್ಯಾದಿ.)

15. ಸ್ಥಳೀಯ ಚಾನಲ್‌ಗಳಲ್ಲಿ ಟಿ.ವಿ.ಸ್ಪಾಟ್ ಗಳು/ ಸ್ಕ್ರಾಲ್ ಸಂದೇಶಗಳ ಭಿತ್ತರಿಸಲಾಗುತ್ತಿದೆ.

16. ಸಾಮಾಜಿಕ ಮಾಧ್ಯಮಗಳ ಮೂಲಕ ಸಂದೇಶಗಳು ಮತ್ತು ಸಮೂಹ ಮಾಧ್ಯಮದ ಮೂಲಕ (ಫೇಸ್‌ಬುಕ್. ಯೂಟ್ಯೂಬ್. ವಾಟ್ಸ್‌ಆಪ್ ಇತ್ಯಾದಿ.) ಸಂದೇಶಗಳು ಹಾಗೂ ವಿಡಿಯೋಸ್ಪಾಟ್ ಗಳನ್ನು ರವಾನಿಸಲಾಗುತ್ತಿದೆ.

17. ಬಸ್ಸುಗಳು ಮತ್ತು ಬಸ್ ತಂಗುದಾಣಗಳ ಮೇಲೆ ಪ್ರಚಾರ ಹಾಗೂ ರಾಜ್ಯ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಮೈಕಿಂಗ್, ಆಡಿಯೋ-ವಿಡಿಯೋ ಕ್ಲಿಪಿಂಗ್‌ಗಳನ್ನು ಭಿತ್ತರಿಸಲಾಗುತ್ತಿದೆ.

18. ಪ್ರತಿದಿನ ಘನತ್ಯಾಜ್ಯ ಸಂಗ್ರಹಣಕ್ಕೆ ಬರುವ ವಾಹನಗಳ ಮೂಲಕ ಡೆಂಗ್ಯೂ ನಿಯಂತ್ರಣ ಕುರಿತು ಮೈಕಿಂಗ್ ಮೂಲಕ ಪ್ರಚುರ ಪಡಿಸಲಾಗುತ್ತಿದೆ.

**ಆಕುಕ 51 ಎಸ್‌ಎಂಎಂ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ**
**ಕಲ್ಯಾಣ ಸಚಿವರು**